
# ರೆಟಿನಲ್ ವೇನ್ ಅಕ್ಲೂಜನ್


ರೆಟಿನಲ್ ವೇನ್ ಅಕ್ಲೂಜನ್‌ನ ಲಕ್ಷಣಗಳು,
ತಡೆಗಟ್ಟುವಿಕೆ ಮತ್ತು ಚಿಕಿತ್ಸೆಯ ಕ್ರಮಗಳು.



## ಮಾನವ ಕಣ್ಣುಗಳು


ಮಾನವ ಕಣ್ಣುಗಳನ್ನು ಶರೀರದ ಅತ್ಯಂತ ಜಟಿಲವಾದ ಅಂಗವೆಂದು ಪರಿಗಣಿಸಲಾಗುತ್ತದೆ.


ಕಾರ್ನಿಯಾ ಮೂಲಕ ಬೆಳಕು ಪ್ರವೇಶ ಮಾಡುತ್ತದೆ, ಕಣ್ಣು ಗೊಂಬೆ ಎಂದು ಕರೆಯಲಾಗುವ ಪಾಪೆಯ ತೆರೆದ ಭಾಗದ ಮೂಲಕ ಹಾದು ಹೋಗುತ್ತದೆ ಮತ್ತು ನಂತರ ಲೆನ್ಸ್ ಮೇಲೆ ಹಾದು ಹೋಗಿ ಕಣ್ಣಿನ ಹಿಂಭಾಗದಲ್ಲಿರುವ ಇನ್‌ರ್ ಲೈನಿಂಗ್ ರೆಟಿನಾ (ಅಕ್ಷಿಪಟಲ) ಮೇಲೆ ಬೀಳುತ್ತದೆ.




## ರೆಟಿನಾ


ರೆಟಿನಾ ಬೆಳಕಿನ ಸಂವೇದನೆಯ ಜೀವಕೋಶಗಳಿಂದ ಅಥವಾ ರಾಡ್ಸ್ ಮತ್ತು ಕೋನ್ಸ್ ಎಂದು ಕರೆಯಲಾಗುವ ಫೋಟೊರಿಸೆಪ್ಟರ್ಸ್‌ನಿಂದ ಮಾಡಲ್ಪಟ್ಟಿರುತ್ತದೆ. ಮ್ಯಾಕ್ಯುಲಾ ರೆಟಿನಾದ ಕೇಂದ್ರಭಾಗದಲ್ಲಿದ್ದು ಇದು ತೀಕ್ಷ್ಣ ಕೇಂದ್ರ ದೃಷ್ಟಿಗೆ ಕಾರಣವಾಗಿರುತ್ತದೆ. ಫೊವಿಯಾ ಮ್ಯಾಕ್ಯುಲಾದಲ್ಲಿನ ಒಂದು ಚಿಕ್ಕ ಒತ್ತಡವಾಗಿದ್ದು ಎಲ್ಲಕ್ಕಿಂತ ಸೂಕ್ಷ್ಮಾತಿ ಸೂಕ್ಷ್ಮ ದೃಷ್ಟಿಯನ್ನು ಒದಗಿಸುತ್ತದೆ. ಅಕ್ಷಿಪಟಲದ(ರೆಟಿನಾ) ಮೇಲೆ ಪ್ರಕಾಶ ಬಿದ್ದಾಗ, ಫೊಟೊರಿಸೆಪ್ಟರ್ಸ್ ಆಪ್ಟಿಕ್ ನರ್ವ್‌ನೊಂದಿಗೆ ಮಿದುಳಿಗೆ ಸಂದೇಶ ಕಳುಹಿಸುತ್ತದೆ, ಇದರಿಂದಾಗಿ ವಸ್ತು ಕಂಡುಬರುತ್ತದೆ.






## ರೆಟಿನಲ್ ವೇನ್ ಅಕ್ಲೂಜನ್ ( ಆರ್‌ವ್ಹಿ ಒ) ಎಂದರೇನು?

ರೆಟಿನಲ್ ವೇನ್ ಅಕ್ಲೂಜನ್ ಅನ್ನು ಕೆಲವೊಮ್ಮೆ ''ಕಣ್ಣಿನ ಸ್ಟ್ರೋಕ್'' ಎಂದೂ ಕರೆಯಲಾಗುತ್ತದೆ. ಇದರಲ್ಲಿ ನಿಮ್ಮ ರೆಟಿನಾ ಹಿಂಬದಿಯಿಂದ ನಿಮ್ಮ ಹೃದಯಕ್ಕೆ ಹಿಂತಿರುಗಿ ಹೋಗುವ ರಕ್ತದ ಒಂದು ನಾಳದಲ್ಲಿ ತಡೆಯುಂಟಾಗಿರುತ್ತದೆ. ನಿಮ್ಮ ರೆಟಿನಾ ನಾಳದ ರಕ್ತದ ಗರಣೆಗಟ್ಟುವಿಕೆ ಅಥವಾ ದ್ರವ ಗಟ್ಟಿಗೊಳ್ಳುವಿಕೆಯಿಂದುಂಟಾದ ತಡೆಯಿಂದಾಗಿ ಬೆಳಕನ್ನು ಸೋಸುವಿಕೆಯ ನಿಮ್ಮ ಸಾಮರ್ಥ್ಯದಲ್ಲಿ ಮತ್ತು ನೋಡುವ ನಿಮ್ಮ ಸಾಮರ್ಥ್ಯದಲ್ಲಿ ವ್ಯತ್ಯಯವಾಗುತ್ತದೆ. ದೃಷ್ಟಿ ಹಾನಿಯು ಗಂಭೀರತೆ ಯಾವ ರಕ್ತನಾಳಕ್ಕೆ ತಡೆಯಾಗಿದೆ ಎನ್ನುವುದನ್ನವಲಂಬಿಸಿರುತ್ತದೆ.





## ರೆಟಿನಲ್ ವೇನ್ ಅಕ್ಲೂಜನ್‌ನಲ್ಲಿಯ ಪ್ರಕಾರಗಳು

ಎರಡು ಪ್ರಕಾರದ ರೆಟಿನಲ್ ರಕ್ತನಾಳಗಳಿರುತ್ತವೆ. ಒಂದು ಕೇಂದ್ರ ರಕ್ತನಾಳವಿದ್ದು ಅದರ ಹಲವಾರು ಚಿಕ್ಕ ಚಿಕ್ಕ ಉಪ ಶಾಖೆಗಳಿರುತ್ತವೆ. ರೆಟಿನಲ್ ರಕ್ತನಾಳಕ್ಕೆ ತಡೆಯುಂಟಾದಾಗ, ಅದು ರೆಟಿನಾದಿಂದ ರಕ್ತವನ್ನು ಹೊರಹಾಕುವುದಿಲ್ಲ. ಇದರಿಂದಾಗಿ ತಡೆಯೊಡ್ಡಲ್ಪಟ್ಟ ರಕ್ತನಾಳದಿಂದ ದ್ರವ ಸೋರಿಕೆಯಾಗುತ್ತದೆ ಮತ್ತು ಹ್ಯಾಮರೇಜ್ (ರಕ್ತ ಸೋರುವಿಕೆ) ಉಂಟಾಗುತ್ತದೆ.

ರೆಟಿನಲ್ ವೇನ್ ಅಕ್ಲೂಜನ್‌ನಲ್ಲಿ ಎರಡು ಪ್ರಕಾರಗಳಿರುತ್ತವೆ : ಸೆಂಟ್ರಲ್ ರೆಟಿನಲ್ ವೇನ್ ಅಕ್ಲೂಜನ್ (ಸಿಆರ್‌ವ್ಹಿ ಒ) ನಲ್ಲಿ ಕೇಂದ್ರ ರೆಟಿನಲ್ ರಕ್ತನಾಳಕ್ಕೆ ತಡೆವೊಡ್ಡಲ್ಪಡುತ್ತದೆ. ಬ್ರ್ಯಾಂಚ್ ರೆಟಿನಲ್ ವೇನ್ ಅಕ್ಲೂಜನ್ (ಬಿಆರ್‌ವ್ಹಿ ಒ) ನಲ್ಲಿ ಚಿಕ್ಕ ಒಂದು ರಕ್ತನಾಳದ ಶಾಖೆಗೆ ತಡೆವೊಡ್ಡಲ್ಪಟ್ಟಿರುತ್ತದೆ.

## ಚಿಹ್ನೆ ಮತ್ತು ಲಕ್ಷಣಗಳು

ರೆಟಿನಲ್ ವೇನ್ ಅಕ್ಲೂಜನ್‌ನ ಆರಂಭಿಕ ಲಕ್ಷಣವೆಂದರೆ ಮೊಟ್ಟ ಮೊದಲು ಒಂದು ಕಣ್ಣಿನಲ್ಲಿ ಮಾತ್ರ ಸಾಮಾನ್ಯವಾಗಿ ಒಮ್ಮಿಂದೊಮ್ಮೆಲೆ ದೃಷ್ಟಿ ಮಂದಾಗುವುದು ಅಥವಾ ದೃಷ್ಟಿ ಹಾನಿಯಾಗುವುದು ಉಂಟಾಗುತ್ತದೆ.



**ಸಾಮಾನ್ಯ ದೃಷ್ಟಿ**




**ಮಂದಾದ ದೃಷ್ಟಿ**



**ವ್ಯತ್ಯಯದ ದೃಷ್ಟಿ**


## ರೆಟಿನಲ್ ವೇನ್ ಅಕ್ಲೂಜನ್ ( ಆರ್‌ವ್ಹಿ ಒ ) ಗೆ ಕಾರಣಗಳಾವವು?



ಅಥೆರೊಸ್ಕ್ಲರೊಸಿಸ್



ಧೂಮಪಾನ




ಗ್ಲೂಕೊಮಾ



ಅಧಿಕ ರಕ್ತದೊತ್ತಡ




ಮ್ಯಾಕ್ಯುಲರ್ ಇಡಿಮಾ



ಡೈಯಾಬಿಟಿಸ್



ಅಧಿಕ ಕೊಲೆಸ್ಟ್ರಾಲ್




ರಕ್ತ ಗರಣೆಗಟ್ಟಿರುವ ವ್ಯತ್ಯಯಗಳು

## ರೆಟಿನಲ್ ವೇನ್ ಅಕ್ಲೂಜನ್ ಅನ್ನು ಹೇಗೆ ನಿಭಾಯಿಸಬೇಕು?

### ತಪಾಸಣೆ:

ಈ ಕಾಯಿಲೆಯನ್ನು ದೃಷ್ಟಿ ಮತ್ತು ಪ್ರೆಶರ್ ಚೆಕ್ಸ್, ನಿಮ್ಮ ಕಣ್ಣಿನ ಸರಫೇಸಿಸ್ ಮತ್ತು ವೆಸೆಲ್ಸ್ ಪರೀಕ್ಷೆಯನ್ನೊಳಗೊಂಡು, ಸಮಗ್ರ ಕಣ್ಣು ಪರೀಕ್ಷೆಯ ತಪಾಸಣೆ ಮಾಡಲಾಗುವುದು. ರೆಟಿನಲ್ ವೇನ್ ಅಕ್ಲೂಜನ್ ತಪಾಸಣೆಗಾಗಿ ಇತರ ಪರೀಕ್ಷೆಗಳನ್ನು ಒಳಗೊಂಡಿರುತ್ತದೆ:




### ಅಫ್ತಾಲ್ಮೊಸ್ಕೊಪಿ

ಆರ್‌ವಿಒಯಿಂದುಂಟಾದ ಬದಲಾವಣೆಗಳನ್ನು ಆಫ್ತಾಲ್ಮೊಸ್ಕೊಪ್ ಎನ್ನಲಾಗುವ ಉಪಕರಣದಿಂದ ರೆಟಿನಾ ಪರೀಕ್ಷೆಯಿಂದ ಕಂಡು ಹಿಡಿಯಲಾಗುವುದು.


### ಆಪ್ಟಿಕಲ್ ಕೊಹೆರೆನ್ಸ್ ಟೊಮೊಗ್ರಾಫಿ (ಒಸಿಟಿ)

5 ಮೈಕ್ರೊನ್ಸ್ ರೆಜ್ಯುಲುಶನ್‌ನೊಂದಿಗೆ ಆಫ್ತಾಲ್ಮೊಸ್ಕೊಪ್ ಸ್ಕ್ಯಾನಿಂಗ್‌ನಿಂದ ರೆಟಿನಾದ ಹೈ ಡೆಫಿನೀಶನ್ ಚಿತ್ರ ತೆಗೆಯಲಾಗುವುದು. ನಿಮ್ಮ ರೆಟಿನಾ ದಪ್ಪಳತೆಯ ಮಾಪನದ ಮೂಲಕ ಬಾವು ಮತ್ತು ಇಡಿಮಾ ಇರುವುದನ್ನು ಈ ಚಿತ್ರಗಳು ನಿರ್ಧರಿಸುತ್ತವೆ. ವೈದ್ಯರು ನಿಮ್ಮ ಚಿಕಿತ್ಸೆಯಾದ್ಯಂತ ಒಸಿಟಿ ಚಿತ್ರಗಳನ್ನು ಬಳಸಿ ಕಾಯಿಲೆ ಬೆಳೆಯುತ್ತಿರುವುದನ್ನು ವಸ್ತುನಿಷ್ಠವಾಗಿ ಬರೆದಿಟ್ಟುಕೊಳ್ಳುವರು.





### ಫಂಡಸ್ ಫ್ಲೊರೊಸೀನ್ ಆ್ಯಂಜಿಯೊಗ್ರಾಫಿ (ಎಫ್‌ಎಫ್‌ಎ)

ಇದು ತೋಳಿನ ರಕ್ತನಾಳದಲ್ಲಿ ಡೈ ಇಂಜೆಕ್ಟ್ ಮಾಡಿ ರೆಟಿನಲ್ ರಕ್ತನಾಳದಲ್ಲಿ ಸಾಗುವಂತೆ ಮಾಡುವ ಒಂದು ಪರೀಕ್ಷೆಯ ವಿಧಾನವಾಗಿರುವುದು. ವಿಶೇಷ ಚಿತ್ರಗಳು ಕಣ್ಣಿನ ತಜ್ಞರು ರಕ್ತನಾಳಗಳನ್ನು ನೋಡಲು ನೆರವಾಗುವವು.




## ಚಿಕಿತ್ಸೆ:

### ಆ್ಯಂಟಿ–ವ್ಹಿ ಇ ಜಿ ಎಫ್ ಇಂಜೆಕ್ಷನ್ ಥೆರಪಿ



ಆ್ಯಂಟಿ– ವ್ಹಿಇಜಿಎಫ್ ಡ್ರಗ್ಸ್ ವ್ಹಿಇಜಿಎಫ್ (ವಸ್ಕ್ಯುಲರ್ ಎಂಡೊಥಿಲಿಯಲ್ ಗ್ರೊಥ್ ಫ್ಯಾಕ್ಟರ್) ಗುರಿಯಿಟ್ಟುಕೊಂಡು ತಡೆಯನ್ನೊಡ್ಡುವವು. ರೆಟಿನಾ ಕಾಯಿಲೆಯಲ್ಲಿನ ವ್ಹಿಇಜಿಎಫ್ ಕಡಿಮೆ ಮಟ್ಟಗಳು ರೆಟಿನಲ್ ರಕ್ತನಾಳಗಳ ಮೇಲೆ ಇದರ ಪರಿಣಾಮ, ಮ್ಯಾಕ್ಯುಲರ್ ಇಡಿಮಾ ಕಡಿಮೆಗೊಳಿಸುವುದು ಮತ್ತು ಅಸಾಮಾನ್ಯ ನಾಳಗಳ ಬೆಳವಣಿಗೆಯಂಥ ಇತರ ಜಟಿಲತೆ ಸಂಭವಿಸುವುದನ್ನು ಕಡಿಮೆಗೊಳಿಸುವವು. ಆ್ಯಂಟಿ–ವ್ಹಿಇಜಿಎಫ್ ಔಷಧಗಳು ಹಲವಾರು ಆರ್‌ವ್ಹಿ ಒ ರೋಗಿಗಳಿಗೆ ಮ್ಯಾಕ್ಯುಲರ್ ಇಡಿಮಾ ಚಿಕಿತ್ಸೆಯಲ್ಲಿ ಪರಿಣಾಮಕಾರಿ ಔಷಧವೆನಿಸುವುದು, ಇತರ ಪ್ರಮುಖ ಕಣ್ಣಿನ ಸ್ಥಿತಿಗತಿಯನ್ನು ಬೆಳೆಸುವ ಅಪಾಯವಿಲ್ಲದೆ ದೃಷ್ಟಿಯ ನಿಖರತೆಯ ಸುಧಾರಣೆಯನ್ನು ತೋರಿಸುವುದು.





### ಕೊರ್ಟಿಕೊಸ್ಟೆರಾಯಿಡ್ ಥೆರಪಿ

ಸ್ಟೆರಾಯಿಡ್ಸ್ ನಾಳದ ಗೋಡೆಯನ್ನು ಸ್ಥಿರಗೊಳಿಸಿ ವಸ್ಕ್ಯುಲರ್ ಪ್ರವೇಶ ಸಾಧ್ಯತೆಯನ್ನು ಕಡಿಮೆಗೊಳಿಸುತ್ತದೆ. ಇದನ್ನು ಆಂಟ್ರಾವಿಟ್ರಿಯಲ್ ಇಂಜೆಕ್ಷನ್ ಆಗಿ ಅಥವಾ ಸಸ್ಟೇನ್ಡ್– ರಿಲೀಸ್ ಇಂಪ್ಲಾಂಟ್ ಮೂಲಕ ಕೊಡಲಾಗುತ್ತದೆ.

### ಲೇಸರ್ ಫೊಟೊಕೊಆಗ್ಯುಲೇಶನ್

ಗ್ರಿಡ್ ಲೇಸರ್ ಫೊಟೊಕೊಆಗ್ಯುಲೇಶನ್ ಸಿಆರ್‌ವ್ಹಿಒ ರೋಗಿಗಳಲ್ಲಿ ಮ್ಯಾಕ್ಯುಲರ್ ಇಡಿಮಾ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿರುತ್ತದೆ, ಚಿಕಿತ್ಸೆ ಮಾಡಿಕೊಳ್ಳದ ರೋಗಿಗಳ ಹೋಲಿಕೆಯಲ್ಲಿ ದೃಷ್ಟಿಯ ವಿಷಯದಲ್ಲಿ ಇದು ಲಾಭಕೊಡುವುದಿಲ್ಲ, ಆದ್ದರಿಂದ ಇದನ್ನು ಸಿಆರ್‌ವ್ಹಿಒ ರೋಗಿಗಳಿಗಾಗಿ ಶಿಫಾರಸ್ಸು ಮಾಡಲಾಗುವುದಿಲ್ಲ.





### ದೈನಂದಿನ ಉಪಚಾರ

ಈ ಕಾಯಿಲೆ ರಕ್ತನಾಳದಲ್ಲಿ ಉಂಟಾಗುವುದರಿಂದ, ನೀವು ಇದರ ಅಪಾಯವನ್ನು ನಿಮ್ಮ ರಕ್ತನಾಳದ ಸಂರಕ್ಷಣೆಯಿಂದ ಮತ್ತು ಆರೋಗ್ಯಕರ ನಾಳದ ಅಂಗಾಂಶ ಕಾಪಾಡಿಕೊಳ್ಳುವುದರಿಂದ ಕಡಿಮೆ ಮಾಡಿಕೊಳ್ಳಬಹುದಾಗಿದೆ. ಆರೋಗ್ಯಕರ ಜೀವನಶೈಲಿ ಮತ್ತು ಆಹಾರ ಬದಲಾವಣೆಗಳಲ್ಲಿ ಇವುಗಳು ಒಳಗೊಂಡಿರುತ್ತವೆ:

- ನಿಯಮಿತವಾಗಿ ವ್ಯಾಯಾಮ ಮಾಡಿ
- ಆರೋಗ್ಯಕರ ತೂಕ ಕಾಯ್ದುಕೊಳ್ಳುವುದು
- ಧೂಮಪಾನ ಬಿಟ್ಟುಬಿಡುವುದು
- ಡೈಯಾಬಿಟಿಸ್ ನಿಯಂತ್ರಣದಲ್ಲಿಟ್ಟುಕೊಳ್ಳುವುದು
- ರಕ್ತದೊತ್ತಡವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು
- ನಿಮ್ಮ ಕೊಲೆಸ್ಟ್ರಾಲ್ ಕಡಿಮೆ ಮಾಡಿಕೊಳ್ಳುವುದು
- ನಿಮ್ಮ ವೈದ್ಯರು ಶಿಫಾರಸ್ಸು ಮಾಡಿದಲ್ಲಿ ಆ್ಯಸ್ಪ್ರಿನ್ ಅಥವಾ ಇತರ ಬ್ಲಡ್ ಥಿನರ್ಸ್ ತೆಗೆದುಕೊಳ್ಳುವುದು

ನಿಯಮಿತವಾಗಿ ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಮುಂದೆ ಉಂಟಾಗಬಹುದಾದ ಯಾವುದೇ ಕಣ್ಣಿನ ಕಾಯಿಲೆಯನ್ನು ಆರಂಭದಲ್ಲೇ ಕಂಡು ಹಿಡಿಯಲು ಮತ್ತು ಅದರ ತಪಾಸಣೆ ಮಾಡಲು ವೈದ್ಯರಿಗೆ ಅನುಕೂಲವಾಗುತ್ತದೆ.







## ಆ್ಯಂಟಿ – ವ್ಹಿ ಇ ಜಿ ಎಫ್ ಇಂಜೆಕ್ಷನ್ ಥೆರಪಿ

**ರೆಟಿನಲ್ ವೇನ್ ಅಕ್ಲುಜನ್ ನಂತರದ ಮ್ಯಾಕ್ಯುಲರ್ ಇಡಿಮಾಗಾಗಿ ಅಂಗೀಕೃತ ಔಷಧವಾಗಿದೆ**

## ಇದು ಹೇಗೆ ಕೆಲಸ ಮಾಡುತ್ತದೆ



ರೆಟಿನಲ್ ವೇನ್ ಅಕ್ಲೂಜನ್‌ನಲ್ಲಿ, ಮ್ಯಾಕ್ಯುಲಾದಲ್ಲಿ ರಕ್ತ ಮತ್ತು ದ್ರವದ ಸೋರುವಿಕೆಯಿಂದಾಗಿ ಬಾವು ಬಂದು, ಮ್ಯಾಕ್ಯುಲರ್ ಇಡಿಮಾ ಎನ್ನುವ ಸ್ಥಿತಿ ಗತಿ ಉಂಟಾಗುತ್ತದೆ, ಇದರಿಂದ ದೃಷ್ಟಿ ಮಂದಾಗುವುದು ಮತ್ತು / ಅಥವಾ ದೃಷ್ಟಿ ಹಾನಿ ಉಂಟಾಗುತ್ತದೆ.

ಆ್ಯಂಟಿ–ವ್ಹಿಇಜಿಎಫ್ ಇಂಜೆಕ್ಷನ್ ರಕ್ತನಾಳದಿಂದ ಸೋರಿಕೆಯನ್ನು ತಡೆಗಟ್ಟುತ್ತದೆ ಮತ್ತು ಮ್ಯಾಕ್ಯುಲರ್ ಇಡಿಮಾ ಕಡಿಮೆಗೊಳಿಸುತ್ತದೆ ಮತ್ತು ನಂತರದ ದೃಷ್ಟಿ ಹಾನಿಯ ಅಪಾಯವನ್ನು ಕೂಡ ಕಡಿಮೆಗೊಳಿಸುತ್ತದೆ.


ಔಷಧದ ಪರಿಣಾಮ ಒಂದು ತಿಂಗಳು ಅಥವಾ ಕೆಲವೊಮ್ಮೆ ಅದಕ್ಕಿಂತ ಹೆಚ್ಚು ಇರುತ್ತದೆ, ಆದ್ದರಿಂದ ನೀವು ಪಡೆದುಕೊಳ್ಳುವ ಇಂಜೆಕ್ಷನ್‌ಗಳ ಸಂಖ್ಯೆ ನಿಮ್ಮ ರೋಗದ ಸ್ಥಿತಿ ಗತಿ ಮತ್ತು ವೈದ್ಯರ ಸಲಹೆಯನ್ನು ಅವಲಂಬಿಸಿರುತ್ತದೆ.

## ಲಾಭಗಳು

ಆ್ಯಂಟಿ–ವಿಇಜಿಎಫ್ ಇಂಜೆಕ್ಷನ್ ಚಿಕಿತ್ಸೆ ಮಹತ್ವದ ದೃಷ್ಟಿಯ ಗುಣಮಟ್ಟ ( ಬಣ್ಣ, ಬೆಳಕು ಮತ್ತು ತೀಕ್ಷ್ಣತೆ ) ಸುಧಾರಿಸುತ್ತದೆ ಮತ್ತು ನಿಮ್ಮ ಜೀವನದ ಗುಣಮಟ್ಟದ ಮೇಲೆ ಪರಿಣಾಮವನ್ನುಂಟು ಮಾಡುವ ಓದುವ, ಟೆಲಿವಿಜನ್ ನೋಡುವ, ಕಾರ್ ಡ್ರೈವಿಂಗ್ ಮಾಡುವಂತಹ ಹಲವಾರು ಚಟುವಟಿಕೆಗಳನ್ನು ಸುಧಾರಿಸುತ್ತದೆ.







**ಘೋಷಣೆ:** ಈ ವಿಷಯ ವಸ್ತು ನಿಮ್ಮ ಮಾಹಿತಿಗೆಂದು ಮಾತ್ರ ಇರುತ್ತದೆ. ಇದು ನಿಮ್ಮ ವೈದ್ಯರ ಅಥವಾ ಆರೋಗ್ಯ ಉಪಚಾರಕರ ಸಲಹೆಯ ಅಥವಾ ಸಮಾಲೋಚನೆಯ ಪರಿಹಾರವಾಗಲಾರದು. ಮಾಹಿತಿಯನ್ನು ಸಾಧ್ಯವಾದಷ್ಟು ನಿಖರವಾಗಿ ಮತ್ತು ಸಮಯಕ್ಕನುಸಾರವಾಗಿ ಇರಲು ನಾವು ಸಾಧ್ಯವಾದಷ್ಟು ಪ್ರಯತ್ನಿಸಿದ್ದೇವೆ, ಆದರೆ ಈ ವಿಷಯದಲ್ಲಿ ಭರವಸೆ ನೀಡಲಾಗುವುದಿಲ್ಲ. ನೀವು ನಿಮ್ಮ ಕಣ್ಣಿನ ತಜ್ಞರಾಗಲಿ ಅಥವಾ ಆರೋಗ್ಯ ಉಪಚಾರಕರಾಗಲಿ ಅವರ ಸಲಹೆಯನ್ನು ಪಡೆದುಕೊಂಡು ಈ ವಿಷಯದಲ್ಲಿ ಮುಂದುವರಿಯಬೇಕು.

INTAS

**INTAS PHARMACEUTICALS LIMITED**

Near Sola Bridge, S.G. Highway, Thaltej,
Ahmedabad – 380054, Gujarat, INDIA.
Website : www.intaspharma.com

RAZUMAB™
Ranibizumab 0.5 mg Injection